ಬಂದ್ರು ಸಾರ್!

-37ನೇ ಪುಟದಿಂದ

ವಿವರಗಳ ಬಗ್ಗೆ ಹೇಳಿದಾಗ ರವಿಚಂದ್ರನ್ ಅವರಿಗೆ ಮೊದಲು ಅರ್ಥ ಆಗ್ಲಿಲ್ಲ. ಅಲ್ಲೇ ಹಾಡು ಬರೆದು ವಿವರಿಸಿದೆ. ತಕ್ಷಣ ಹೂಂ ಅಂದ್ರು. ಅದೇ ರೀತಿಯ ಸೆನ್ಸೇಷನ್ ರಣಧೀರ ಚಿತ್ರದ ಸಂಗೀತದಲ್ಲೂ ಉಂಟಾಯಿತು. ಅದರಲ್ಲಿ 'ಒಂದಾನೊಂದು ಕಾಲದಲ್ಲಿ ಆರಂಭ..' ಎನ್ನುವ ಹಾಡು. ಹಿಂದಿಯ ಹೀರೊ ಚಿತ್ರದಲ್ಲಿ ಹರಿಪ್ರಸಾದ್ ಚೌರಾಸಿಯಾ ಅವರ ಫ್ಲೂಟ್ ಟ್ಯೂನ್ ಅನ್ನು ಇಲ್ಲಿ ತೆಗೆದುಕೊಳ್ಳಲು ಅನುಮತಿ ಪಡೆದಿದ್ದೆ. ಅದಕ್ಕೇ ಹೊಸ ಹಾಡೊಂದನ್ನು ಸೇರಿಸಿದೆವು. ಎಸ್‌ಪಿಬಿ ಮತ್ತು ಎಸ್.ಜಾನಕಿ ಅವರು ಹಾಡಬೇಕಿತ್ತು. ಆದರೆ ಶೂಟಿಂಗ್ ಮಾಡ್ತಾ ಹಾಡು ದೃಶ್ಯವೇ ಆಗಿ ಬದಲಾಗುತ್ತಾ ಹೋಯಿತು. ಎಲ್ಲ ಸಿನಿಮಾಗಳ ಹೆಸರುಗಳನ್ನು ಸೇರಿಸಿ ಹಾಡು ಬರೆಯಬೇಕು ಎನ್ನುವ ಆಲೋಚನೆ. ಕೆಎಸ್‌ಎಲ್ ಸ್ವಾಮಿ ಅವರು ಸುಮಾರು 300 ಸಿನಿಮಾಗಳ ಹೆಸರು ಒದಗಿಸಿದ್ರು! ಶೂಟಿಂಗ್ ಜತೆಗೇ ಹಾಡು ಬೆಳೀತು. ಎಸ್ಪಿಬಿ, ಜಾನಕಿ ಸಿಗಲಿಲ್ಲ. ಪಿ.ಸುಶೀಲ ಮತ್ತು ರಮೇಶ್ ಹಾಡಿದ್ರು.

★ ಪ್ರೇಮಲೋಕ, ರಣಧೀರ ದಂತಹ ಇನ್ನೊಂದು ಸೂಪರ್ ಹಿಟ್ ಸಂಗೀತಮಯ ಸಿನಿಮಾ ಬರಲು ಸಾಧ್ಯವಿಲ್ಲವೆ?

ಈಗೇನಾಗ್ತಿದೆ ಅಂದ್ರೆ.. ಹೊಸ ಹಾಡುಗಳಿವೆ, ಆದರೆ ಹೊಸ ಕಥೆಗಳಿಲ್ಲ. ಸಿನಿಮಾದಲ್ಲಿ ಕಥೆ ಹೇಳುವಾಗ ಒಂದು ಥರದಲ್ಲಿ ಕಲ್ಚರಲ್ ವ್ಯೂಪಾಯಿಂಟ್ ಇರಬೇಕು. ಈಗೇನಿದ್ದರೂ ಬರೀ ಕೀಟಲೆ, ಉಡಾಫೆಗಳಲ್ಲೇ ಮುಗಿಸುತ್ತಾರೆ. ಸಿನಿಮಾದಲ್ಲೂ ಈ ರೀತಿಯ ಸ್ಥಾಗಿತ್ಯ ಇದ್ದದ್ದು, ಬಹುಶಃ ಯೋಗರಾಜ್ ಭಟ್‌ರಂತಹ ನಿರ್ದೇಶಕರು ಬಂದ ಮೇಲೆ ಇನ್ನೊಂದು ದಿಕ್ಕಿಗೆ ಹೊರಳ್ತು. ಅದೂ ಅಲ್ಲದೆ ಆಗ ನಾನೊಬ್ಬನೇ ಇದ್ದೆ. ಈಗ ಹೊಸ ಸಂಗೀತ ನಿರ್ದೇಶಕರು ಬೇಜಾನ್ ಇದ್ದಾರೆ. ಇಲ್ಲೀಗ ಎಲ್ಲರಿಗೂ ಅಲ್ಲಾವುದ್ದೀನನ ದೀಪ ಸಿಕ್ಕಿದೆ. ಕೈಬೆರಳ ತುದಿಯಲ್ಲಿ ಮಾಹಿತಿಗಳು ಸಿಗುತ್ತವೆ. ತಂತ್ರಜ್ಞಾನ ಎನ್ನುವುದು ಕೆಲಸವನ್ನು ಸುಲಭ ಮಾಡಿದೆ. ಆದರೆ ಅದಷ್ಟೇ ಸಿನಿಮಾ ಅಲ್ಲವಲ್ಲ. ನಾನು ಸಿನಿಮಾಕ್ಕೆ ಬರೋ ಮುನ್ನ ರಂಗಭೂಮಿಯಲ್ಲಿ ಬೆಳೆದವನು. ಸಂಗ್ಯಾಬಾಳ್ಯಾ, ಜೋಕುಮಾರಸ್ವಾಮಿ ಎಲ್ಲ ಆಡ್ತಿದ್ವಿ. ಲಾವಣಿ, ಜಾನಪದ ಎಲ್ಲದರ ಪಾಕ ಇತ್ತು.

★ 'ನೆನಪಿರಲಿ' ಸಿನಿಮಾದಲ್ಲಿ ಸಂಗೀತದ ಮೂಲಕವೇ ಕಥೆ ಹೇಳಿದ ಕ್ರಮವೂ ಸೂಪರ್‌ಹಿಟ್ ಆಯ್ತು..

ರತ್ನಜ ಪ್ರತಿಭಾವಂತ ನಿರ್ದೇಶಕ. ಆ ಸಿನಿಮಾ ಶತದಿನೋತ್ಸವ ಆಚರಿಸಿತು. ನನ್ನ ಕೇಳಿದರೆ ನಾವು ಅದನ್ನು ಇನ್ನೂ ಚೆನ್ನಾಗಿ ಮಾಡಬಹುದಿತ್ತು.

★ ಟೀವಿಯಲ್ಲಿ ಸಂಗೀತ ಕಾರ್ಯಕ್ರಮದ ಜಡ್ಜ್ ಆದಿರಿ..





ಅಯ್ಯೋ.. ಏನ್ ಕೇಳ್ತೀರಿ, ನೀವು ಅಂದ್ರೆ ಭಯಂಕರ ಬಂಧು ಇದ್ದಂಗೆ!ನಾವು ಬಿಟ್ಟಿರಕಾಗಲ್ಲ, ಅವ್ರೂ ನಮ್ಮನ್ನು ಬಿಡಲ್ಲ. ಇತ್ತೀಚೆಗೆ ಒಂದು ಟೀವಿ ಯವರು 'ಹಂಸಲೇಖಾಗೆ ಎರಡನೇ ಬಾರಿ ಹಾರ್ಟ್ ಅಟ್ಯಾಕ್ ಆಗಿದೆ' ಎಂದು ಬ್ರೇಕಿಂಗ್ ನ್ಯೂಸ್ ಮಾಡಿ ನನ್ನ ಬದುಕನ್ನೇ ಆ ದಿನದ ಮಟ್ಟಿಗೆ ಬ್ರೇಕ್ ಮಾಡಿಬಿಟ್ರು! ಮೊದಲ ಹಾರ್ಟ್ ಆಪರೇಷನ್ ಆಗಿ 13 ವರ್ಷ ಆಯ್ತು. ಗುಂಡುಕಲ್ಲಿನಂತೆ ಇದ್ದೀನಿ. ರೊಟೀನ್ ಚೆಕಪ್‌ಗೆ ಅಂತ ಆಸ್ಪತ್ರೆಗೆ ಹೋಗಿದ್ರೆ, ಅಲ್ಲಿ ಮಸಾಜ್ ಮಾಡೋಕೆ ಬಂದವನು ಟೀವಿ ಆಪರೇಷನ್ ಮಾಡ್ಬಿಟ್ಟ. ಯಾರಿಗೆ ಹೇಳ್ತೀರಿ ಕಥೆ.. ಅಲ್ಲಿಗೆ ಹೋದ್ರೂ ನಿಮ್ಮ ಆರೋಗ್ಯ ನೋಡ್ಕೊಳ್ಳಿ ಸಾರ್, ಚೆನ್ನಾಗಿದ್ದೀರಾ ಸಾರ್... ಅಯ್ಯೊ.. ಅವತ್ತು ಗುಟ್ಟಾಗಿ ಆ ಆಸ್ಪತ್ರೆಯಿಂದಲೇ ಕಣ್ಮರೆಯಾದೆ..

★ ಈಗ ಆರೋಗ್ಯ ಹೇಗಿದೆ ಸಾರ್...?

ಹ್ಹಾ ಹ್ಹಾ ಹಾ.... ಗುಡ್ ಜೋಕ್!

★ ನಿಮ್ಮ ಮಗ ಅಲಂಕಾರ್‌ನನ್ನು ಹೀರೋ ಮಾಡಿ ಸಿನಿಮಾ ತೆಗೆದ್ರಿ. ಆ ಸಿನಿಮಾ ಎಲ್ಲೋಯ್ತು, ಬಿಡುಗಡೇನೇ ಮಾಡ್ಲಿಲ್ಲ..?

ಆ ಸುದ್ದಿ ಬೇಡ ಬಿಡಿ. ಅದು 'ಡಿಲೇ' ಆದ ಸಿನಿಮಾ. 4-5 ವರ್ಷ ಡಬ್ಬಾದಲ್ಲಿ ಇಟ್ಕೊಂಡು ಆಮೇಲೆ ಏನ್ ಬಿಡುಗಡೆ ಮಾಡ್ತೀರಿ.. ಪ್ರೇಕ್ಷಕರಿಗೆ ಬಿಸಿ ಬಿಸಿ ಕೊಡಬೇಕು. ಮಗನಿಗೆ ಕನ್ವಿನ್ಸ್ ಮಾಡಿ ಬೇಕಿದ್ರೆ ಆ ಸಿನಿಮಾನಾ ಮನೇಲೇ ನೋಡ್ಕೋ ಅಂದೆ. ಸಿಕ್ ಪ್ರಾಜೆಕ್ಟ್ ಬೇಡ ಅಂದೆ.

★ ಈಗ ಏನ್ ಮಾಡ್ತಿದಾನೆ?

ಅಲಂಕಾರ್ ಅನ್ನೋದು ಸಿನಿಮಾಕ್ಕೆ ಇಟ್ಟ ಹೆಸರು. ಅವನು ಸೂರ್ಯ ಪ್ರಕಾಶ್. ಬಿಕಾಂ ಮಾಡಿ ಲಂಡನ್ ಮ್ಯೂಸಿಕ್ ಸ್ಕೂಲ್‌ನಲ್ಲಿ ಕೋರ್ಸ್ ಪಾಸ್ ಮಾಡಿದ. ನನ್ನ ಶಾಲೆ ನೋಡ್ಕೋತಿದಾನೆ. ಸ್ಟ್ರಿಂಗ್ಸ್ ಅನ್ನೋ ಆಡಿಯೊ ಸಂಸ್ಥೆ ನಡೆಸುತ್ತಿದ್ದಾನೆ. ಮುಂದೆ ಸಿನಿಮಾ ಡೈರಕ್ಷನ್ ಕೂಡಾ ಮಾಡಬಹುದು. ನನಗೆ ಅವನೇ ಸಹಾಯಕ ನಿರ್ದೇಶಕ.

★ ಚಿತ್ರಸಂಗೀತದ ಸದ್ಯದ ಸ್ಥಿತಿ ಬಗ್ಗೆ ಏನಂತೀರಿ?

ತುಂಬ ಟ್ಯಾಲೆಂಟೆಡ್ ಸಂಗೀತ ನಿರ್ದೇಶಕರಿದ್ದಾರೆ. ಮ್ಯೂಸಿಕ್ ಈಸ್ ಮೀಡಿಯಾ. ನೀವು ಲೈಟ್ ಆಗಿ ಬರೆದ್ರೆ ಜನ ಲೈಟ್ ಆಗಿ ರಿಸೀವ್ ಮಾಡ್ತಾರೆ. ನಿಮ್ಮ ಹಾಡಿನಲ್ಲಿ ಭಾವತೀವ್ರತೆ ಇದ್ದರೆ ಅಷ್ಟೇ ತೀವ್ರತೆಯಿಂದ ಸ್ವೀಕರಿಸ್ತಾರೆ. ಈಗ ಪ್ರೇಕ್ಷಕರು ವ್ಯಕ್ತಿವಾದಿಗಳಾಗಿದ್ದಾರೆ ಅನ್ಸುತ್ತೆ. ಮೊದಲೆಲ್ಲ ತುಳಸೀಕಟ್ಟೆ ಇಟ್ಟುಕೊಂಡು ಪೂಜೆ ಮಾಡ್ತಿದ್ದೋರು. ಈಗ ನಾಲ್ಕನೇ ಬಾಲ್ಕನಿಯಲ್ಲಿ ಬಾಗಿಲ ಮುಂದೆ ನಿಂತು ಹಾಗೆಯೇ ಊದುಬತ್ತಿ ಹಚ್ಚಿ ಕೈಮುಗೀತಾರೆ. ಜಾತ್ರೆಯಲ್ಲೂ ಇಂಡಿವಿಜುವಾಲಿಟಿ ಬಂದಿದೆ. ಇವತ್ತು ಸಿನಿಮಾದಿಂದ ಸಂಗೀತ ಹೊರಬಂದಿದೆ. ಸಂಗೀತವೇ ಪ್ರತ್ಯೇಕ ಬಿಸಿನೆಸ್ ಆಗಿ ಬೆಳೆದಿದೆ. ಸಂಗೀತವನ್ನು ಸೇರಿಸ್ಕೊಂಡ್ರೆ ನಮಗೇ ಲಾಭ. ಬಿಟ್ರೆ ಸಂಗೀತಕ್ಕೇನೂ ನಷ್ಟ ಆಗಲ್ಲ. ಸಂಗೀತಕ್ಕೆ 5000 ವರ್ಷದ ಆಯುಷ್ಯ, ಸಿನಿಮಾಕ್ಕೆ ಬರೇ ನೂರು ವರ್ಷಗಳ ವಯಸ್ಸು.!

★ ಬಾತ್‌ರೂಂ ನಲ್ಲಿ ಇವತ್ತು ಯಾವ ಹಾಡು ಗುಣುಗುಣಿಸುತ್ತಿದ್ರಿ..?

ಯೆ ಜಿಂದಗೀ ಉಸೀ ಕಿ ಹೈ... ಜೊ ಕಿಸೀ ಕಾ ಹೋಗಯಾ..

ಅನಾರ್ಕಲಿ! ಲತಾ ದೀದಿ ಮತ್ತು ರಾಜಿಂದರ್ ಕ್ರಿಶನ್. ಸಂಗೀತ ನೀಡಿದ್ದು ಸಿ.ರಾಮಚಂದ್ರ. ಓಲ್ಡ್ ಈಸ್ ಗೋಲ್ಡ್!

ಮಾತುಕತೆ ಮುಗಿಸುತ್ತಿದ್ದಂತೆಯೇ ಹೊರಗೆ ಕಾಯುತ್ತಿದ್ದ ಅಭಿಮಾನಿಯೊಬ್ಬ ನುಗ್ಗಿದ. 'ಸಾರ್.. ನೀವು ಸಿನಿಮಾ ರಂಗಕ್ಕೆ ಮತ್ತೆ ಬರಬೇಕು ಸಾರ್. ನಾವೆಲ್ಲ ಅಭಿಮಾನಿಗಳು ನಿಮ್ಮ ಹಾಡುಗಳಿಗೆ ಕಾಯ್ತಿದ್ದೇವೆ. ಒಂದ್ಸಲ ಸಿಗಂದೂರು ಚೌಡೇಶ್ವರಿ ಅಮ್ಮನ ದೇವಸ್ಥಾನಕ್ಕೆ ಹೋಗಿ ಬನ್ನಿ ಸಾರ್..' ಎಂದು ಕಾಲಿಗೆ ಬಿದ್ದ! 'ಚೌಡೇಶ್ವರಿ ನಮ್ಮನೆ ದೇವ್ರು ಕಣಯ್ಯ..' ಎಂದು ಹಂಸ್ ನಗುತ್ತಾ ನಿಂತರು. ■